ಶುರು ಮಾಡು. ಎಲ್ಲಾ ಕಂಪ್ನಿ ಅಲ್ಲೇ ಸಿಗುತ್ತೆ" ಅಂತ ನಾನು ಹೇಳುತ್ತಿದ್ದೆ.

ನಾಟಕದ ರುಚಿ ಒಂದು ಎಕ್ಸ್‌ಕ್ಲೂಸಿವ್ ಕ್ಲಬ್ಬಿನ ಸದಸ್ಯತ್ವಕ್ಕೆ, ಆವರ್ತಕ್ಕೆ ಸಮ ಅಂತ ತಿಳಿದುಕೊಳ್ಳಿ. ಅಲ್ಲಿ ಜಂಗುಳಿ ಇರುವುದಿಲ್ಲ. ಇಷ್ಟಿಷ್ಟೇ ಜನ ಬರುತ್ತಾರೆ. ಯಾಕೆಂದರೆ, ನಾಟಕ ಸಿನಿಮಾದ ಹಾಗೆ ಇಡೀ ದಿನ ಓಡುವುದಿಲ್ಲ. ಇರುವ ಷೋಗಳ ಸಮಯಕ್ಕೆ ನಿಜವಾಗಲೂ ನಾಟಕದ ಬಗ್ಗೆ ಪ್ರೀತಿ ಇರುವವರು ಬರುತ್ತಾರೆ.

ಹಾಗೆ ನಾಟಕ ನೋಡಲು ಬಂದವರು ನಾಲ್ಕೈದು ನಾಟಕ ಪ್ರದರ್ಶನಗಳಲ್ಲಿ ನಿಮ್ಮನ್ನು ಮೇಲಿಂದ ಮೇಲೆ ಕಂಡರೆ, ಪರಿಚಯದ ನಗೆ ಬೀರುತ್ತಾರೆ. ಆಮೇಲೆ ಯಾವಾಗಲೋ ಪರಿಚಯ ಮಾಡಿಕೊಳ್ಳುತ್ತಾರೆ, ಮತ್ತೆ ಹೊಸ ನಾಟಕಗಳ ಮಾಹಿತಿ ನಿಮಗೆ ಅಲ್ಲೇ ಸಿಕ್ಕುಬಿಡುತ್ತದೆ. ಮುಂದಿನ ಪ್ರದರ್ಶನ ಫಿಕ್ಸ್! ಹೀಗೆ ಒಂದು ಹೊಸ ಊರಿನಲ್ಲಿ ನಿಮ್ಮನ್ನು ಒಳಗೊಳ್ಳುವ ಪ್ರಕ್ರಿಯೆ ನಾಟಕದಂಥ ಸಾಮಾಜಿಕ ಕಲೆಯಿಂದ ಸಾಧ್ಯ. ನಿಮ್ಮ ನೌಕರಿ, ಸ್ನೇಹಿತರು, ಬಳಗ, ವಾಟ್ಸ್‌ಆ್ಯಪ್ ಗ್ರೂಪು, ನೀವಿರುವ ಏರಿಯಾ, ನಿಮ್ಮ ನೆರೆಹೊರೆ, ಸೊಪ್ಪು–ತರಕಾರಿ–ಅಂಗಡಿ ಒಂದು ವಲಯ ಆಗುವಂತೆಯೇ ನಾಟಕ ಕೂಡ ನಿಮ್ಮ ವಲಯವನ್ನು ಹಾಗೂ ಬೌದ್ಧಿಕ ಜಗತ್ತನ್ನು ಹೆಚ್ಚು ಶ್ರೀಮಂತಗೊಳಿಸಲು ಸಾಧ್ಯವಾಗುವ ಒಂದು ಅತ್ಯಂತ ಆಸಕ್ತಿದಾಯಕ ಮಾರ್ಗ. ಆಧ್ಯಾತ್ಮಿಕ, ಸಾಹಿತ್ಯ ಬಳಗಗಳು, ರೀಡಿಂಗ್ ಗ್ರೂಪುಗಳಿಂದಲೂ ಇದು ಸಾಧ್ಯ ಆಗುತ್ತದೆ ಅಂತ ಇಟ್ಟುಕೊಳ್ಳಿ.

ಸಿನಿಮಾ ಒಂದು 'ವೈಯಕ್ತಿಕ' ಅನುಭವ ಆಗಬಹುದು. ಆದರೆ, ಸಿನಿಮಾಕ್ಕೆ ಹೋಗುವಾಗ ನೀವು ಸಾಮಾನ್ಯವಾಗಿ 'ಕಂಪನಿ' ಹುಡುಕುತ್ತೀರಿ, ತಿನ್ನಲು ಏನೇನು ಸಿಗಬಹುದು, ಮಲ್ಟಿಪ್ಲೆಕ್ಸಿನಲ್ಲಿ ಸೀಟು ಹೇಗಿರಬಹುದು ಅಂತೆಲ್ಲಾ ಯೋಚಿಸುತ್ತೀರಿ. ಒಬ್ಬರೇ ಹೋಗುವವರು ಇದ್ದಾರಾದರೂ ಅದು ತೀರಾ ಅನಿವಾರ್ಯವಾದಾಗ ಮಾತ್ರ ಇರುವ ಆಯ್ಕೆ. ಆದರೆ, ನಾಟಕ ಹಾಗಲ್ಲ. ನಾಟಕಕ್ಕೆ ಇರುವ ಆಸಕ್ತ ವಲಯ ಸೆಲೆಕ್ಟಿವ್ ಆಗಿರುವಂಥದ್ದು. ಬೇಕು ಅನ್ನಿಸಿದಾಗ ನಾಟಕಕ್ಕೆ ನೀವು ಒಬ್ಬರೇ ಹೋದರೂ ಯಾರೂ ಕೇರ್ ಮಾಡುವುದಿಲ್ಲ, ಅಂತೆಯೇ ನೀವೂ ಕೇರ್ ಮಾಡುವುದಿಲ್ಲ! ಅಲ್ಲಿ ರಂಗಮಂದಿರದ ಸೀಟುಗಳು ಸಾಧಾರಣವಾಗಿರುತ್ತವೆ, ಆದರೂ ಅದು ಮುಖ್ಯವಾಗುವುದಿಲ್ಲ. (ಕತ್ತಲೆ ಬಿಟ್ಟರೆ ಸಿನಿಮಾಕ್ಕೂ ನಾಟಕಕ್ಕೂ ದುಡ್ಡಿನ ಸ್ಕೇಲು ಉಂಟು. ಟಿಕೇಟು, ಅದನ್ನ ಬುಕ್ ಮಾಡುವ ವಿಧಾನ, ಸಿನಿಮಾ ಹಾಲ್/ರಂಗಮಂದಿರ ಇರುವ ಜಾಗ, ಅಲ್ಲಿನ ಪಾರ್ಕಿಂಗ್ ವ್ಯವಸ್ಥೆ, ಶೌಚಾಲಯಗಳು, ಕುಡಿಯುವ ನೀರಿನ ವ್ಯವಸ್ಥೆ ಎಲ್ಲ ಅಂದರೆ ಎಲ್ಲವೂ ಭಿನ್ನ. ನಮ್ಮ ರಂಗಮಂದಿರಗಳು ಇನ್ನೂ ಹೆಚ್ಚು ಸುಸಜ್ಜಿತವಾಗಬೇಕು ಎನ್ನುವುದಂತೂ ಹಗಲಿನಷ್ಟು ನಿಜವಾದ ಮಾತು).

ಈಗ ನಾಟಕದ ಕೇಂದ್ರ ಬಿಂದು ಏನು ಅಂತ ಯೋಚಿಸಿದರೆ ನಿಮಗೆ ಸಿಗುವ ಉತ್ತರ ಸರಳ. ನಾಟಕದ ಕೇಂದ್ರ ಬಿಂದು ನಾಟಕವೇ! ಸಿನಿಮಾ ಹತ್ತು ಸಾರಿ ನೋಡಿದರೂ ಒಂದೇ ರೀತಿ ಇರುತ್ತದೆ. ಆದರೆ ನಾಟಕ? ಹತ್ತು ಷೋ ಆದರೂ ಭಿನ್ನವಾಗಿರುತ್ತದೆ. ಅದು ಜೀವಂತ ಕಲೆ. ಏಕತಾನತೆ ಇಲ್ಲದ್ದು.

ಒಂದು ನಟವರ್ಗ, ಬೆಳಕು ಇತ್ಯಾದಿ ನಿರ್ವಹಣೆ ಮಾಡುವ ತಾಂತ್ರಿಕ ವರ್ಗ, ಸಂಗೀತ ಮತ್ತು ಪ್ರಸಾಧನ ಎಲ್ಲವೂ ನಿಮಗೋಸ್ಕರ ಅಂದರೆ ಪ್ರೇಕ್ಷಕರಿಗೋಸ್ಕರ ಪ್ರತೀ ಶೋನಲ್ಲೂ ತಯಾರಾಗಿ ನಿಮ್ಮ ಜೊತೆಗೇ ಸಂಪೂರ್ಣ ಪ್ರಯಾಣ ಮಾಡುವ ಕಲೆ ಅಂದರೆ ನಾಟಕ. ಇತ್ತೀಚಿನ ದಿನಗಳಲ್ಲಿ ಸಂಗೀತ ರೆಕಾರ್ಡೆಡ್ ಆಗಿ ಬರುತ್ತಿದೆ ಎನ್ನುವುದು ನಿಜವಾದರೂ ಅದನ್ನು ನಿರ್ವಹಿಸಲು ಒಬ್ಬರು ನಾಟಕದ ಮೇಲೆ ಗಮನ ಇಟ್ಟೇ ಇರುತ್ತಾರೆ. ಬೆಳಕನ್ನು ನಿರ್ವಹಿಸುವವರು ಬೇರೆ ಬೇರೆ ಸ್ಟೇಜ್ ಮೇಲೆ ಪ್ರದರ್ಶನ ಇರುವಾಗ ಮೊದಲಿಗೆ ಲೈಟ್ಸ್ ಅನ್ನೇ ಹೊಂದಿಸಿಕೊಳ್ಳುವುದು.

ಅಕಸ್ಮಾತ್ ನಟರು ಬೆಳಕನ್ನು ತಮ್ಮ ಮೇಲೆ ಬರುವಂತೆ ನಿಲ್ಲದೆ/ಕೂರದೆ ಹೋದರೆ (ನಾಟಕದ ಭಾಷೆಯಲ್ಲಿ ಲೈಟ್ ತಗೊಳ್ಳೋದು ಅಂತಾರೆ) ಅಥವಾ ನಿರ್ಧಾರಿತ ಜಾಗದಲ್ಲಿ ನಿಲ್ಲದೆ ಮತ್ತೆಲ್ಲೋ